# Telephone Conversation between PM and Prime Minister of Bhutan

April 16, 2020

---

## ಪ್ರಧಾನ  ಮಂತ್ರಿ ಮತ್ತು ಭೂತಾನ್  ನ ಪ್ರಧಾನ  ಮಂತ್ರಿ ನಡುವೆ ದೂರವಾಣಿ ಸಂಭಾಷಣೆ

ಏಪ್ರಿಲ್ 16, 2020

ಪ್ರಧಾನ  ಮಂತ್ರಿ ಶ್ರೀ ನರೇಂದ್ರ ಮೋದಿ ಯವರು ಶ್ರೇಷ್ಠ ಭೂತಾನ್ ಸಾಮ್ರಾಜ್ಯದ ಪ್ರಧಾನ ಮಂತ್ರಿ (ಲಿಯೊಂಚೆನ್) ಡಾ. ಲೋಟೇ ತ್ಸೆರಿಂಗ್ ರೊಂದಿಗೆ ಇಂದು ದೂರವಾಣಿ ಸಂಭಾಷಣೆ ನಡೆಸಿದರು.

ಕೋವಿಡ್-19 ಸಾಂಕ್ರಾಮಿಕ  ರೋಗದ ಹಿನ್ನೆಲೆಯಲ್ಲಿ ಇಬ್ಬರು ಪ್ರಧಾನ ಮಂತ್ರಿಗಳು ಪ್ರಾದೇಶಿಕ ಪರಿಸ್ಥಿತಿಯ ಬಗ್ಗೆ ಚರ್ಚಿಸಿದರು ಮತ್ತು ಅದರ ಪರಿಣಾಮಗಳನ್ನು ನಿಯಂತ್ರಿಸಲು ತಮ್ಮ ಸರ್ಕಾರಗಳು ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಪರಸ್ಪರ ತಿಳಿಸಿದರು.

ಸಾಮ್ರಾಜ್ಯದೊಳಗೆ ಸೋಂಕಿನ ಹರಡುವಿಕೆಯನ್ನು ಮಿತಿಗೊಳಿಸಲು ಭೂತಾನ್ ರಾಜ ಮತ್ತು ಲಿಯೊನ್ಚೆನ್ ಡಾ. ತ್ಶೆರಿಂಗ್ ರವರು ಮುಂದೆ  ನಿಂತು ಮುನ್ನಡೆಸಿದ ರೀತಿಗೆ ಪ್ರಧಾನ ಮಂತ್ರಿಯವರು ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತದಂತಹ ದೊಡ್ಡ ಮತ್ತು ಸಂಕೀರ್ಣ ದೇಶದಲ್ಲಿ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡುವಾಗಲೂ ಪ್ರಾದೇಶಿಕ ಮಟ್ಟದಲ್ಲಿ ಕೋವಿಡ್ ವಿರೋಧಿ ಸಮನ್ವಯವನ್ನು ಉತ್ತೇಜಿಸಲು ಮುನ್ನಡೆ  ಸಾಧಿಸಿದ ಪ್ರಧಾನ ಮಂತ್ರಿಗೆ ಲಿಯೊನ್ಚೆನ್ ಡಾ.ತಶೇರಿಂಗ್ ರವರು ಧನ್ಯವಾದ ತಿಳಿಸಿದರು .

ಸಾರ್ಕ್ ದೇಶಗಳ ನಾಯಕರ ನಡುವೆ ಮಾರ್ಚ್ 15 ರಂದು ಒಪ್ಪಿದ ವಿಶೇಷ ವ್ಯವಸ್ಥೆಗಳನ್ನು ಅನುಷ್ಠಾನಗೊಳಿಸುವಲ್ಲಿ ಪ್ರಗತಿ ಸಾಧಿಸಿದ ಬಗ್ಗೆ ನಾಯಕರು ಸಂತೋಷ ವ್ಯಕ್ತಪಡಿಸಿದರು.

ಭಾರತ-ಭೂತಾನ್ ಸಂಬಂಧಗಳ ಸಮಯರಹಿತ ಮತ್ತು ವಿಶೇಷ ಸ್ವರೂಪವನ್ನು ಪ್ರಧಾನ ಮಂತ್ರಿಯವರು ಉಲ್ಲೇಖಿಸಿದರು ಹಾಗೂ  ಸಾಂಕ್ರಾಮಿಕ ರೋಗದ ಆರೋಗ್ಯ ಮತ್ತು ಆರ್ಥಿಕ ಪರಿಣಾಮವನ್ನು ಕಡಿಮೆ ಮಾಡಲು ಭೂತಾನ್ಗೆ ಭಾರತವು ಸಾಧ್ಯವಿರುವ ಎಲ್ಲಾ ಬೆಂಬಲವನ್ನು ಖಚಿತಪಡಿಸುತ್ತದೆ ಎಂದು ಲಿಯೊನ್ಚೆನ್ ರವರು ಭರವಸೆ ನೀಡಿದರು.

ಹಿಸ್ ಮೆಜೆಸ್ಟಿ ದಿ ಕಿಂಗ್, ಲಿಯೊನ್ಚೆನ್ ಡಾ. ತಶೆರಿಂಗ್ ಮತ್ತು ಡ್ರುಕ್ ಯುಲ್ನ ಎಲ್ಲಾ ಸ್ನೇಹಪರ ಜನರ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಪ್ರಧಾನ  ಮಂತ್ರಿಯವರು ತಮ್ಮ ಶುಭಾಶಯಗಳನ್ನು ತಿಳಿಸಿದರು.

**ನವ ದೆಹಲಿ**

**ಏಪ್ರಿಲ್ 16, 2020**

DISCLAIMER: This is an approximate translation. The original is available in English on MEA’s website and may be referred to as the official press release.